692(1164) : ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2004–05, 2005–06 ನೇ ಸಾಲುಗಳಲ್ಲಿ ಚಿಕ್ಕಮಗಳೂರು ಜಿಲ್ಲೆ ವ್ಯಾಪ್ತಿಯಲ್ಲಿ ಬರಗಾಲಕ್ಕೆ ಎಷ್ಟು ಹಣ ಹಾಗೂ ಆಹಾರಧಾನ್ಯ ಬಿಡುಗಡೆ ಮಾಡಲಾಗಿದೆ ;

ಆ) 2004 ರಿಂದ 2006ರವರೆಗೆ ತರೀಕೆರೆ ವ್ಯಾಪ್ತಿಯಲ್ಲಿ ಬರಗಾಲಕ್ಕೆ ಎಷ್ಟು ಹಣ ಆಹಾರಧಾನ್ಯ ಬಿಡುಗಡೆ ಮಾಡಲಾಗಿದೆ ;

ಇ) ಈವರೆಗೆ, ಖರ್ಚಾದ ಹಣ ಮತ್ತು ಆಹಾರಧಾನ್ಯ ಹಾಗೂ ಪೂರ್ಣಕಾಮಗಾರಿ ಬಗ್ಗೆ ವಿವರ ನೀಡುವುದು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) 2004–05ನೇ ಸಾಲಿನ ಬರಪರಿಹಾರ ನಿಧಿಯಡಿಯಲ್ಲಿ ರೂ. 210.00ಲಕ್ಷ ಅನುದಾನವನ್ನು ಹಾಗೂ 7870 ಮೆ.ಟನ್ ಅಕ್ಕಿಯನ್ನು ಬಿಡುಗಡೆ ಮಾಡಲಾಗಿದೆ.

ಆ) 2004–05ನೇ ಸಾಲಿನಲ್ಲಿ ತರೀಕೆರೆ ತಾಲ್ಲೂಕಿಗೆ ರೂ. 56.11 ಲಕ್ಷ ಅನುದಾನವನ್ನು ಹಾಗು 1041.92 ಮೆ.ಟನ್ ಅಕ್ಕಿಯನ್ನು ಹಂಚಿಕೆ ಮಾಡಲಾಗಿದೆ.

ಇ) ರೂ. 165.00 ಲಕ್ಷ ಹಣ ಹಾಗೂ 6515.00 ಮೆ.ಟನ್ ಅಕ್ಕಿ ಖರ್ಚಾಗಿರುತ್ತದೆ. ಜಿಲ್ಲೆಯಲ್ಲಿ ಒಟ್ಟು 463 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

694(1166) : ಶ್ರೀ ಬಾದರ್ಲಿ ಹಂಪನನೌಡ (ಸಿಂಧನೂರು) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ನೇರಲೀಕೇರಿ ಗ್ರಾಮ ವ್ಯಾಪ್ತಿ 64 ಕೆ.ವಿ. ಎಂ.ಯು.ಎಸ್. ಸ್ಟೇಷನ್ ಪ್ರಾರಂಭಿಸಲು ಸರ್ಕಾರವು ಸ್ಥಳವನ್ನು (ಜಾಗವನ್ನು) ಪಡೆದು ಕೊಂಡಿರುವುದು ನಿಜವೇ.

ಆ) ಹಾಗಿದ್ದಲ್ಲಿ, ಎಂ.ಯು.ಎಸ್. ಸ್ಟೇಷನ್ ಅನ್ನು ಎಂದು ಪ್ರಾರಂಭಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ನೇರಲೀಕೆರಿ ಗ್ರಾಮದ ವ್ಯಾಪ್ತಿಯಲ್ಲಿ ಒಂದು 110 ಕೆವಿ ವಿದ್ಯುತ್ ಸಬ್–ಸ್ಟೇಷನ್ (ಎಂ.ಯು.ಎಸ್.ಎಸ್) ಸ್ಥಾಪಿಸಲು ಜಾಗವನ್ನು ಪಡೆದುಕೊಂಡಿರುವುದು ನಿಜ.

ಆ) ಈ ಉದ್ದೇಶಿತ ಸಬ್–ಸ್ಟೇಷನ್ನಿನ ಕಾಮಗಾರಿಯನ್ನು ಮುಂಬರುವ ವರ್ಷವಾದ 2005–06ರಲ್ಲಿ ಪ್ರಾರಂಭಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

695(1167) : ಶ್ರೀ ಬಾದರ್ಲಿ ಹಂಪನನೌಡ (ಸಿಂಧನೂರು) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ 206 ಕಿಮೀ ಇಂದ 168,73 ಹಾಗೂ 170,88 ಕಿಮೀ ವರೆಗಿನ ಅಭಿವೃದ್ಧಿ ಮತ್ತು ಡಬಲ್ ರಸ್ತೆ ಮಾಡಲು ಅಂದಾಜು ವೆಚ್ಚ ತಯಾರಿಸಲಾಗಿದೆಯೇ; ಈ ಕಾಮಗಾರಿಯನ್ನು ಯಾವಾಗ ತೆಗೆದುಕೊಳ್ಳಲಾಗುವುದು.